

# ಔಷಧಿ ಪುಷ್ಪ ಅಶೋಕ

ಚಿತ್ರ ಬರಹ:
**ಪ.ರಾಮಕೃಷ್ಣ ಶಾಸ್ತ್ರಿ**

ಶ್ರೀಲಂಕಾದಲ್ಲಿ ಸಮೃದ್ಧವಾಗಿ ಕಾಣಸಿಗುವ ಅಶೋಕ, ಸರಕಾ ಇಂಡಿಕಾ ಸಸ್ಯವರ್ಗಕ್ಕೆ ಸೇರಿದೆ. ಹಿಮಾಲಯ ಪರ್ವತದಲ್ಲೂ ಕಾಣಸಿಕೊಂಡಿರುವ ಇದು ಬಂಗಾಳ ಮತ್ತು ದಕ್ಷಿಣ ಭಾರತದ ಬಯಲು ಪ್ರದೇಶಗಳಲ್ಲಿ ಹೇರಳವಾಗಿದೆ. ತಂಪಾದ ಭೂಪ್ರದೇಶ ಅದಕ್ಕೆ ಒಗ್ಗುತ್ತದೆ. 20ರಿಂದ 30 ಅಡಿಯ ತನಕ ಎತ್ತರ ಬೆಳೆಯುವ ಈ ಮರ ನೂರಾರು ವರ್ಷ ಬದುಕುತ್ತದೆ. ಎಲೆಗಳು 15ರಿಂದ 20 ಸೆಂ.ಮೀ ಉದ್ದವಾಗಿದ್ದು, ನೀಲಮಿಶ್ರಿತ ಹಸುರಾಗಿವೆ. ಹಳದಿ ಬೆರೆತ ಕಿತ್ತಳೆ ವರ್ಣದ ಹೂಗಳು ಗುಚ್ಛವಾಗಿದ್ದು ದಿನಗಳೆದಂತೆ ಕೆಂಬಣ್ಣ ತಳೆಯುತ್ತದೆ. ಡಿಸೆಂಬರ್‌ನಿಂದ ಏಪ್ರಿಲ್ ತನಕ ಹೂಗಳ ಸುಗ್ಗಿ!

ಇದರ ಹೂ, ಬೀಜ, ಮರದ ತೊಗಟೆಗಳನ್ನು ಔಷಧದ ಕಣಜವೆಂದು ಆಯುರ್ವೇದ ಹೊಗಳಿದೆ. ವಾತ, ಪಿತ್ತ, ಜ್ವರನಾಶಕ ಗುಣಗಳನ್ನು ಇದು ಹೊಂದಿದೆ. ಮಹಿಳೆಯರಿಗೆ ಋತುಸಂಬಂಧಿಯಾದ ಅತಿ ರಕ್ತಸ್ರಾವ, ಕಿಬ್ಬೊಟ್ಟೆ ನೋವು, ಅನಿಯಮಿತ ಋತುಚಕ್ರ ನಿವಾರಣೆಗೆ ಅಶೋಕಪುಷ್ಪದ ಆರಿಷ್ಟ ಔಷಧಿ. ದೇಹದೊಳಗಿನ ಇತರ ರಕ್ತಸ್ರಾವವನ್ನೂ ಇದು ತಡೆಯುತ್ತದೆ.

ಕಿಡ್ನಿಯ ಕಲ್ಲುಗಳ ನಿವಾರಣೆಯಲ್ಲಿ ಇದರ ಬೀಜಗಳ ಚೂರ್ಣ ಪರಿಣಾಮಕಾರಿ ಎನ್ನಲಾಗಿದೆ. ಮರದ ಹಸಿ ತೊಗಟೆಯಿಂದ ಮಾಡಿದ ಕಷಾಯದ ಸೇವನೆ ಮೊಡವೆ ನಿವಾರಕವೂ ಹೌದು. ಹೂವಿನ ಚೂರ್ಣದ ಬಳಕೆಯ ಮೂಲಕ ಪೈಲ್ಸ್, ರಕ್ತಭೇದಿಗಳನ್ನು ಗುಣಪಡಿಸಬಹುದೆಂಬ ಮಾಹಿತಿಯಿದೆ. ಹೆಚ್ಚಿನ ಪರಿಶ್ರಮದ ಕೃಷಿಯ ಅಗತ್ಯವಿಲ್ಲದೆ ಬೆಳೆಯುವ ಈ ಸಸ್ಯಕ್ಕೆ ಸೀತಾ ಅಶೋಕ ಎಂಬ ನಾಮಧೇಯವೂ ಇದೆ. ಇದರಲ್ಲಿ ಬಿಳಿ ಬಣ್ಣದ ಹೂ ಬಿಡುವ ವಿಶೇಷ ಜಾತಿಯೂ ಉಂಟು.